SERVICE ABOVE SELF



Rotary

विश्वमित्रः

# ವಿಶ್ವಮಿತ್ರ

# VISHWAMITHRA

Weekly House Bulletin of Rotary Club Shimoga, R.I. Dist. 3182

Rotary THE MAGIC OF ROTARY 2024-25

Rtn. Stephanie A. Urchick
RI President 2024-25

Rtn. CA Dev Anand
District Governor 2024-25

Rtn. K. Sooryanarayana Udpa
President, Mob: 99009 66114

Rtn. N.G. Usha
Secretary, Mob : 81975 92278


Rtn. M. Madhavachar
Bulletin Editor, Mob: 98862 73495

We meet every Wednesday at 6.45p.m. at Rotary Youth Centre, Sowlanga Road, L.B.S.Nagar, Shivamogga- 577 204

ಸಂಪುಟ – 67 ಸಂಚಿಕೆ –13 ದಿನಾಂಕ : 09–10–2024

## ದಿನಾಂಕ: 09.10.2024 ರ ವಾರದ ಸಭೆಯ ವರದಿ

**ರೋಟರಿ ಕ್ಲಬ್ ಶಿವಮೊಗ್ಗದ 15 ನೇ ಸಭೆ. ನವರಾತ್ರಿ ಹಬ್ಬದ ಸೊಬಗಿನ ಹಾಗೂ ಬೆಂಬಿಡದೇ ಸುರಿದ ವರ್ಷ ಧಾರೆಗಳ ನಡುವೆ ನಡೆದ ಸಭೆ. ನಮ್ಮ ನಿತ್ಯಜೀವನದಲ್ಲಿ ಆಧ್ಯಾತ್ಮಿಕತೆ ಎಂಬ ವಿಚಾರವಾಗಿ ಮಾತುಕತೆ ಹರಟೆಕಟ್ಟೆ ಮತ್ತು ವಿದುಷಿ ಶ್ರೀಮತಿ ಸುಶ್ಮಿತಾರವರಿಂದ 'ಆಯಿಗಿರಿ ನಂದಿನಿ' ಹಾಡಿಗೆ ನೃತ್ಯ ಪ್ರದರ್ಶನ ಸಭೆಗೆ ಮೆರುಗನ್ನು ತಂದಿತು. ವೇದಿಕೆ ಕಾರ್ಯಕ್ರಮದ ಮೊದಲು ರೊ.ರಮಾ ಗೋಪಾಲ್‌ರವರು 'ಕೊಡು ಬೇಗ ದಿವ್ಯಮತಿ' ಗೀತೆಯನ್ನು ಹಾಡಿದರು. ವೇದಿಕೆಯಲ್ಲಿ ಕಾರ್ಯಕ್ರಮ ಸಮಿತಿ ಚೇರ್ಮನ್ ರೊ.ಎನ್.ವಿ. ಭಟ್, ಅಧ್ಯಕ್ಷರಾದ ರೊ. ಕೆ. ಸೂರ್ಯನಾರಾಯಣ ಉಡುಪ, ಕಾರ್ಯದರ್ಶಿ ರೊ. ಎನ್.ಜಿ. ಉಷಾ ಮತ್ತು ವಿದುಷಿ ಶ್ರೀಮತಿ ಸುಶ್ಮಿತಾ ಉಪಸ್ಥಿತರಿದ್ದರು.**







ನವರಾತ್ರಿಯ ಹಬ್ಬದ ಪ್ರಯುಕ್ತ ದೇವಿಗೆ ಶ್ರೀಮತಿ ಸುಶ್ಮಿತಾರವರಿಂದ ದೀಪ ಬೆಳಗುವುದರ ಮೂಲಕ ಸಭೆ ಆರಂಭವಾಯಿತು. ಅಧ್ಯಕ್ಷರು, ಕಾರ್ಯದರ್ಶಿ, ರೊ. ರಮಾಗೋಪಾಲ್, ರೊ.ಮಲ್ಲಿಕಾ ಜೋಯ್ಸ್, ರೊ.ಭಾರ್ಗವಿ ಭಟ್, ರೊ.ಎನ್.ಜಿ. ಉಷಾ ಮತ್ತು ಶ್ರೀಮತಿ ಹೇಮಾವತಿಯವರು ಜೊತೆಗೂಡಿ ದೀಪ ಬೆಳಗಿದರು. ಸಭೆಯ ಆರಂಭಕ್ಕೆ ರೊ.ಎನ್.ವಿ.ಭಟ್‌ರವರು ಮರಾಠಿಯ– 'ಜಯದುರ್ಗೆ' ಎಂಬ ಹಾಡನ್ನು ಹಾಡಿ ಪ್ರಾರ್ಥಿಸಿದರು. ಅಧ್ಯಕ್ಷರಾದ ರೊ.ಕೆ.ಸೂರ್ಯನಾರಾಯಣ ಉಡುಪರು ಸರ್ವರನ್ನು ಸ್ವಾಗತಿಸಿದರು. ರೊ. ಭಾರ್ಗವಿ ಭಟ್‌ರವರು ಶ್ರೀಮತಿ ಸುಷ್ಮಿತಾರವರ ಪರಿಚಯ ಮಾಡಿಕೊಟ್ಟರು.

ವಿದುಷಿ ಶ್ರೀಮತಿ ಸುಶ್ಮಿತಾರವರು ದೇವಿಯ ಮಹತ್ವವನ್ನು ಸಾರುವ "ಆಯಿಗಿರಿ ನಂದಿನಿ ನಂದಿತ ಮೇದಿನಿ ವಿಶ್ವವಿನೋದಿನಿ ನಂದನುತೆ" ಹಾಡಿಗೆ ನೃತ್ಯ ಮಾಡಿ ಆಗಮಿಸಿದ್ದ ಸರ್ವರ ಮನಸೂರೆಗೊಂಡರು. ಶ್ರೀಮತಿ ಸುಶ್ಮಿತಾರವರು ನೀಡಿದ ಕಾರ್ಯಕ್ರಮದ ಬಗ್ಗೆ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರು ಕೃತಜ್ಞತೆ ತಿಳಿಸಿ ನೆನಪಿನ ಕಾಣಿಕೆ ನೀಡಿ ಗೌರವಿಸಿದರು.

ಕಾರ್ಯಕ್ರಮದ ಮುಂಚೆ ಅಧ್ಯಕ್ಷರಾದ ರೊ.ಕೆ. ಸೂರ್ಯ ನಾರಾಯಣ ಉಡುಪರು ಮಾತನಾಡಿ, ನಮ್ಮ ನಿತ್ಯಜೀವನದಲ್ಲಿ ಸಮಾಜ ಸೇವೆಯಲ್ಲಿ ಆಧ್ಯಾತ್ಮಿಕತೆ ಹೇಗಿರಬೇಕು ಎಂಬುದನ್ನು ತಿಳಿಸಿ ಎಂದು ಸದಸ್ಯರಲ್ಲಿ ಮನವಿ ಮಾಡಿದರು. ಕಾರ್ಯದರ್ಶಿ ರೊ.ಎನ್.ಜಿ. ಉಷಾರವರು ಮಾತನಾಡಿ, ಈಗ ಹಬ್ಬದ ವಾತಾವರಣ ಇದೆ. ಈಗ ಇಸವಿ 2024. ಆದರೆ ನಾವು 2124 ರಲ್ಲಿ ಯುವಜನರಲ್ಲಿ ಆಧ್ಯಾತ್ಮಿಕತೆಯ ಅರಿವು ಹೇಗಿರುತ್ತದೆ ಎಂಬುದು ನಮ್ಮ ಅರಿವಿಗೆ ಬರಬೇಕು ಎನ್ನುತ್ತಾ ಆಧ್ಯಾತ್ಮಿಕತೆಯ ಮಹತ್ವ ಏನು? ಯಾಕೆ ಬೇಕು? ನಮ್ಮ ಮನೋಬಲ ಹೇಗಿರಬೇಕು ? ಇವೆಲ್ಲಕ್ಕೂ ತಮ್ಮ ಅನಿಸಿಕೆ ತಿಳಿಸಿ ಎಂದರು.

2ನೇ ಪುಟಕ್ಕೆ

## ಈ ವಾರದ ಸಭೆ

**ದಿನಾಂಕ : 16–10–2024 ಬುಧವಾರ** **ಸಂಜೆ 6:45**

# TRADERS DAY

**Chief Guest : Rtn. N. Gopinath**

ಮಾಲೀಕರು–ಮಥುರಾ ಪ್ಯಾರಡೈಸ್, ಮಾಜಿ ಅಧ್ಯಕ್ಷರು–ಛೇಂಬರ್ ಆಫ್ ಕಾಮರ್ಸ್

**ಸ್ಥಳ: ಮಥುರಾ ಪ್ಯಾರಡೈಸ್, ಶಿವಮೊಗ್ಗ**

(ಬದಲಾದ ಸ್ಥಳವನ್ನು ಗಮನಿಸಿ)

ದಯವಿಟ್ಟು ರೋಟರಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ






- ರೊ. ಎನ್.ವಿ. ಭಟ್‌ರವರು ಮಾತನಾಡಿ ಶ್ರೀಕೃಷ್ಣನ ಭಗವದ್ಗೀತೆಯ ಉಲ್ಲೇಖ "ಉದ್ಧರೇದಾತ್ಮಾನಂ ಆತ್ಮಾನಂ ಪಾರಾಯಣ:" ಎಂಬ ವಾಕ್ಯ ನಮ್ಮನ್ನು ನಾವು ಅರಿತುಕೊಂಡು ಮುಂದೆ ಸಾಗುವುದೇ ಆಗಿದೆ. ನಮಗೆ ನಾವೇ ಮಿತ್ರ ಮತ್ತು ಶತ್ರುವಾಗಿದ್ದೇವೆ. ಸ್ವಾರ್ಥ ಬಿಟ್ಟು, ಆಸೆಗಳನ್ನು ಕಡಿಮೆ ಮಾಡಿಕೊಂಡು ಉಪಕಾರ ಮಾಡುವುದೇ ಅಲ್ಲದೇ ನಮ್ಮನ್ನು ನಾವು ತಿಳಿಯುವುದು. ಮಾತು ತಪ್ಪದಿರುವುದು. ಉಪಕಾರ ಮಾಡಲಾಗದಿದ್ದರೂ ಅಪಕಾರ ಮಾಡದಿರುವುದು ಇವೆಲ್ಲವೂ ಆಧ್ಯಾತ್ಮಿಕತೆಗೆ ದಾರಿ ಎಂದರು.
- ರೊ. ಟಿ.ಕೆ.ಎಂ. ಭಟ್‌ರವರೂ ಸಹ ಶ್ರೀಕೃಷ್ಣನ ಭಗವದ್ಗೀತೆಯ ಉಲ್ಲೇಖ "ಅನನ್ಯಾಂಶ್ಚಿಂತಯಂತೋಽಮಾಂ ಏ ಜನ ಪರ್ಯುಪಾಸತೆತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಂ" ಎಂಬುದನ್ನು ತಿಳಿಸುತ್ತಾ ಯಾರು ನನ್ನನ್ನು ಅನನ್ಯ ಭಕ್ತಿಯಿಂದ ಪೂಜಿಸುವರೋ ಅಂತಹವರ ಯೋಗಕ್ಷೇಮ ನೋಡಿಕೊಳ್ಳುವುದು ನನ್ನ ಜವಾಬ್ದಾರಿ ಎಂದಿರುವ ಪರಮಾತ್ಮನ ವಾಕ್ಯವನ್ನು ವಿವರಿಸಿದರು. ಪ್ರಪಂಚದ ಸೃಷ್ಟಿಯಲ್ಲಿ ಮನುಷ್ಯನ ಹುಟ್ಟು ವಿಚಿತ್ರ. ಅವನ ಬುದ್ಧಿ ಮತ್ತು ಅತಿಬುದ್ಧಿಯನ್ನು ನಿಯಂತ್ರಿಸಲು ಪುರಾಣ ಪುಣ್ಯಕಥೆ ಆಧ್ಯಾತ್ಮದ ಅನುಸರಣೆ ಅತಿ ಮುಖ್ಯ. ಈ ಹಿಂದೆ ಗುರುಕುಲ ಪದ್ಧತಿ ಇತ್ತು. ಅಲ್ಲಿ ಯಾವ ಜಾತಿ ಕುಲದ ಪ್ರಶ್ನೆಯಿಲ್ಲ. ಯಾರಿಗೆ ಯಾವುದರಲ್ಲಿ ಆಸಕ್ತಿಯಿದೆಯೋ ಅವರು ಅಲ್ಲಿ ತಮ್ಮ ವಿದ್ಯಾಭ್ಯಾಸವನ್ನು ಕಂಡುಕೊಳ್ಳಬೇಕಾಗಿತ್ತು. ಇಲ್ಲಿ ಜಾತಿ ಅವರವರ ವೃತ್ತಿಗನುಗುಣವಾಗಿಯೇ ಹೊರತು, ಹುಟ್ಟಿನಿಂದಲ್ಲ. ಬ್ರಾಹ್ಮಣನಾದವನು ಶೂದ್ರನಾಗಬಹುದಾಗಿತ್ತು. ಕ್ಷತ್ರಿಯನಾದವನೂ ಬ್ರಾಹ್ಮಣನಾಗಬಹುದಾಗಿತ್ತು. ಕ್ಷತ್ರಿಯನಾದವನು ವೈಶ್ಯನಾಗ ಬಹುದಾಗಿತ್ತು. ಇಲ್ಲೆಲ್ಲವೂ ಆಧ್ಯಾತಿಕ ತಳಹದಿ ತನ್ನ ಕಾರ್ಯ ನಿರ್ವಹಿಸಿದೆ ಎಂದರು.
- ರೊ. ವೈ.ವಿ.ವೆಂಕಟರಮಣ ಜೋಯ್ಸ್ ಮಾತನಾಡಿ, ನಮ್ಮ ಆತ್ಮವನ್ನು ಅರಿಯುವುದು, ನಮ್ಮನ್ನು ನಾವು ತಿಳಿದುಕೊಳ್ಳುವುದು, ನಮ್ಮ ಶಕ್ತಿ ನಮಗೆ ಎಷ್ಟು ಉಪಯೋಗವಾಗಿದೆ ಎಂಬುದನ್ನು ನಿತ್ಯಜೀವನದಲ್ಲಿ ತಿಳಿದುಕೊಳ್ಳುವುದೇ ಆಧ್ಯಾತ್ಮ ಎನ್ನುತ್ತಾ ರೋಟರಿ ಚತುರ್ವಿಧ ಪರೀಕ್ಷೆಯ ಬಗ್ಗೆ ಬೆಳಕುಚೆಲ್ಲಿ ಮಾತನಾಡಿದರು. ನಾವು ಇನ್ನೊಬ್ಬರಿಗೆ ಮಾದರಿಯಾಗಬೇಕು. ನಮ್ಮ ಸಂಸಾರ ನಡೆಸಲು ಆಧ್ಯಾತ್ಮಿಕ ಭಾವನೆ ಮುಖ್ಯ. ನಮ್ಮ ಜೀವನದ ಗುರಿಯೇನು ಎಂಬುದನ್ನು, ನಮ್ಮ ವೃತ್ತಿಗೆ ನ್ಯಾಯಕೊಡಬೇಕೆನ್ನುವುದನ್ನು ತಿಳಿಸುತ್ತದೆ ಎಂದರು.
- ರೊ. ಸೆಂಥಿಲ್ ವೇಲನ್‌ರವರು ಮಾತನಾಡುತ್ತಾ ನಮ್ಮ ಮನಸ್ಸಿಗೆ ತೊಂದರೆಯಾಗದಂತೆ ಒಳ್ಳೆಯ ಕೆಲಸ ಮಾಡಬೇಕು. ಬೇರೆಯವರು ಒಳ್ಳೆಯ ಕೆಲಸವನ್ನು ಮಾಡಿದಾಗ ಮೆಚ್ಚುಗೆ ವ್ಯಕ್ತಪಡಿಸಬೇಕು. ನಮ್ಮ ಮನಸ್ಸೆ ನಮಗೆ ಗೈಡ್ ಎಂದರು.
- ರೊ. ಸಿ.ಬಿ.ವೀರಣ್ಣನವರು ಮಾತನಾಡಿ, "ನಹಿ ಜ್ಞಾನೇನ ಸದೃಶಂ" ವಾಕ್ಯವನ್ನು ವಿವರಿಸುತ್ತಾ ಇವೆಲ್ಲವೂ ತತ್ವಶಾಸ್ತ್ರಗಳಿಗೆ ಸಂಬಂಧಿಸಿದುದು. ಪಂಚತತ್ವಗಳಿಂದ ಉದಯಿಸಿದ ನಾವು ಒಳ್ಳೆಯ ಕೆಲಸಮಾಡಬೇಕು. ತಾಯಿಯ ಜೀವನದ ಬಗ್ಗೆ ಅವಳು ಮಕ್ಕಳಿಗಾಗಿ ಮಾಡುವ ಸೇವೆಯ ಬಗ್ಗೆ ತಿಳಿಸುತ್ತಾ, ನಮ್ಮ ಜೀವನದ ಪ್ರತಿಯೊಂದು ಹಂತದಲ್ಲೂ ಆಧ್ಯಾತ್ಮವಿದೆ ಅದನ್ನು ಖುಷಿಯಾಗಿ ತೆಗೆದುಕೊಳ್ಳಬೇಕು. ಇದರಿಂದ ಸಂತೋಷ ನೆಮ್ಮದಿ ದೊರಕುತ್ತದೆ ಎಂದರು.
- ರೊ. ಎಸ್.ಜಿ.ಗೋಪಾಲ್ ಮಾತನಾಡಿ, ನಾವು ಸಂಸಾರದಲ್ಲಿ ಹೇಗಿರಬೇಕು ಎಂದು ಮಾರ್ಗದರ್ಶಿಸುವುದೇ ಆಧ್ಯಾತ್ಮ ಎನ್ನುತ್ತಾ ನಮ್ಮ ಅನುಸರಣೆ ಮತ್ತು ಹಾಸ್ಯದೊಂದಿಗೆ ಬೆರೆತ ಜೀವನವೇ ಆಧ್ಯಾತ್ಮ ಎಂದರು.
- ರೊ. ರಮಾಗೋಪಾಲ್‌ರವರು ಮಾತನಾಡಿ, ನಮ್ಮ ನಡವಳಿಕೆ ನಾವು ಸಮರ್ಪಕವಾಗಿರಬೇಕು. ನಮ್ಮ ಆಧ್ಯಾತ್ಮ ಪಥ ಎಂದರೆ ದೀಪ ಬೆಳಗಿ, ಸ್ತೋತ್ರ ಪಠಣ, ದೇವರನಾಮದ ಗಾಯನ, ಅದನ್ನು ಮಕ್ಕಳಿಗೆ ಅಭ್ಯಾಸ ಮಾಡಿಸುವುದು ಇವೆಲ್ಲವೂ ಆಧ್ಯಾತ್ಮ ಒಂದು ಭಾಗ, ಆ ಪರಂಪರೆಯನ್ನು ಉಳಿಸಬೇಕು, ಬೆಳೆಸಬೇಕು ಎಂದರು.
- ರೋ. ಭಾರ್ಗವಿ ಭಟ್‌ರವರು ಮಾತನಾಡಿ, ಆಧ್ಯಾತ್ಮಿಕತೆ ಬಗ್ಗೆ ಎಲ್ಲರೂ ಕೇಳಿಸಿಕೊಂಡು ಅದರಂತೆ ನಡೆದು ಎಲ್ಲರನ್ನೂ ಆದರಿಸಬೇಕು. ಅದರ ಜ್ಞಾನ ನಮಗೆ ಬರಬೇಕು. ನಮ್ಮೊಳಗೆ ನಾವು ಅವಲೋಕಿಸಿ ಹೇಗಿರಬೇಕು ಎಂದು ತಿಳಿದು ಬೇರೆಯವರಿಗೆ ನೋವುಂಟು ಮಾಡದಿರುವುದೇ ಆಧ್ಯಾತ್ಮ ಎಂದರು.
- ರೊ.ಮಲ್ಲಿಕಾ ಜೋಯ್ಸ್‌ರವರು, ಬೆಳಿಗ್ಗೆಯಿಂದ ಸಂಜೆವರೆವಿಗೆ ಸಮರ್ಪಣಾ ಭಾವದಿಂದ ದೇವರ ಕಾರ್ಯಗಳನ್ನು ಮಾಡುವುದೇ ಆಧ್ಯಾತ್ಮ ಎಂದರು.
- ಶ್ರೀ ಜಿ. ಸತ್ಯನಾರಾಯಣರವರು ಮಾತನಾಡಿ, ಮಂಕುತಿಮ್ಮನ ಕಗ್ಗದಲ್ಲಿರುವ 'ಇರುವ ಕೆಲಸವ ಮಾಡು ಕಿರಿದೆನದೆ ಮನವಿಟ್ಟು' ಎಂಬುದನ್ನು ಈವರೆವಿಗೂ ಇದೇ ತತ್ವದ ಮೇಲೆಯೇ ತನ್ನ ಕೆಲಸವನ್ನು ಮಾಡಿಕೊಂಡು ಬಂದಿದ್ದು ಅದುವೇ ಆಧ್ಯಾತ್ಮದ ಭಾವ ಎಂದರು.
- ಅಂದು ವಿಶೇಷ ಅತಿಥಿಯಾಗಿ ಆಗಮಿಸಿದ್ದ ಕಗ್ಗ ಖ್ಯಾತಿಯ ವಿದ್ವಾನ್ ಜಿ.ಎಸ್. ನಟೇಶ್‌ರವರು ಮಾತನಾಡಿ, ಆತ್ಮದ ಬಗ್ಗೆ ಅಧ್ಯಯನ ಮಾಡುವುದು, ಅಲ್ಲದೇ ಆತ್ಮ ನಮಗೆ ಕಾಣದು. ಕಾಣದೇ ಇರುವುದಕ್ಕೆ ಸಂಸ್ಕಾರ ಕೊಡುವುದೇ ಆಧ್ಯಾತ್ಮ ಎಂದರು. 'ಶರೀರ ಮಾಧ್ಯಂಮಿದಂ ಖಲು ಧರ್ಮ ಸಾಧನಂ' ಎನ್ನುವಂತೆ ನಾವು ಒಳ್ಳೆಯ ಗುಣಗಳನ್ನು ಪಡೆಯಬೇಕು ಎಂದರು. ನಮಗೆ ಶರೀರವಿರಬೇಕಾದರೆ ಜೀವವಿರಬೇಕು. ಜೀವ ಇದ್ದರೆ ಕಣ್ಣು ಕಿವಿ ಜ್ಞಾನವೆಲ್ಲವೂ ದೊರಕುತ್ತದೆ. ಅದಕ್ಕೆ ಸಂಸ್ಕಾರಕೊಟ್ಟರೆ ಅದೇ ಆಧ್ಯಾತ್ಮ. ನಮ್ಮ ಮನಸ್ಸನ್ನು ವಿಸ್ತಾರ ಮಾಡುವುದೇ ಶಿಕ್ಷಣ. ವಿಶಾಲವಾದ ಮನಸ್ಸನ್ನು ಬಳಸಿಕೊಳ್ಳುತ್ತಾ ಭಗವಂತನ ಅಂಶ ಕಾಣುವುದೇ ಆಧ್ಯಾತ್ಮ ಎಂದರು. ಅಶಾಶ್ವತವನ್ನು ಕಾಣುವುದೇ ಆಧ್ಯಾತ್ಮ. ಉಪವಾಸದಿಂದ ಕಾಣುವುದಲ್ಲ. ಕಡಿಮೆ ಸೇವನೆ. ಭಗವಂತನ ಆರಾಧನೆ ಅತಿ ಮುಖ್ಯವಾಗಿದೆ ಸತ್ಯ ಶೋಧನೆಯೆ ಆಧ್ಯಾತ್ಮ. ಯೋಗ, ಬೋಗಗಳನ್ನು ಅನುಭವಿಸಿ ಮುಕ್ತಿ ಪಡೆಯುವುದೇ ಜೀವನದ ಮಾರ್ಗ ಎಂದರು.
- ಅಧ್ಯಕ್ಷರಾದ ರೊ.ಕೆ.ಸೂರ್ಯನಾರಾಯಣ ಉಡುಪರು ಮಾತನಾಡಿ, ಎಲ್ಲರೂ ತುಂಬಾ ಚೆನ್ನಾಗಿ ಮಾತನಾಡಿದ್ದಾರೆ. ಬೇರೆಯವರ ಹಿತ ಬಯಸುವುದು ಆಧ್ಯಾತ್ಮ ಎಂದು ತಿಳಿಸಿದರು.

ಕಾರ್ಯದರ್ಶಿ ರೊ. ಎನ್.ಜಿ. ಉಷಾರವರು ಮಾತನಾಡಿ, ಸದ್ಭಾವನೆಯಿಂದ ಸತ್ಕಾರ್ಯಗಳನ್ನು ಮಾಡಿ ಮತ್ತೊಬ್ಬರ ಒಳಿತಿಗಾಗಿ ಶ್ರಮಿಸುವುದು ಆಧ್ಯಾತ್ಮದ ಒಂದು ಭಾಗ. ಇದರಿಂದ ನಮ್ಮ ಮನೋಬಲವೂ ಹೆಚ್ಚಾಗುವುದು ಎಂದು ಹೇಳಿ ವಂದನಾರ್ಪಣೆಯನ್ನು ಮಾಡಿದರು. ರಾಷ್ಟ್ರಗೀತೆಯೊಂದಿಗೆ ಮತ್ತು ಭಾರತ ಮಾತೆಗೆ ರೊ.ವೈ.ವಿ.ವಿ. ಜಯಕಾರ ಹಾಕುವುದರ ಸಭೆ ಸಂಪನ್ನವಾಯಿತು.

## Rotary Presidential Peace Conference in Istanbul




The 2025 Rotary Presidential Peace Conference led by RI President Stephanie Urchick in Istanbul, Turkey, during **February 20–22, 2025**, will be an opportunity for the Rotary community and partners to build on Rotary's contribution to promoting peace by exploring: Peace in a polarised world; Technology, media and peacebuilding; Environmental issues in peacebuilding; and Making peace last.

The conference will also recognise the launch of the new Otto and Fran Walter Rotary Peace Center in partnership with the Bahçeşehir University in Istanbul.

The three-day conference includes keynote speakers, panel discussions and breakout sessions that will highlight the many ways Rotarians and community leaders can advocate for peace; share stories, insights and ideas about building peace locally and globally; and foster meaningful conversations on promoting peace within our communities and beyond.

Visit *www.rotary.org/istanbul25* to register for the Peace Conference and book your accommodation. Email: ***Istanbul25@rotary.org***

Conference venue: **Hilton Istanbul Bomonti Hotel & Conference Center**

**ಚತುರ್ವಿಧ ಪರೀಕ್ಷೆ– ನಮ್ಮ ಚಿಂತನೆ, ಆಡುವ ಮಾತು ಅಥವಾ ಕೃತಿಗಳಲ್ಲಿ...**

1. ಇದು **ಸತ್ಯವೇ?**
2. ಇದು ಸಂಬಂಧಪಟ್ಟ ಎಲ್ಲರಿಗೆ **ನ್ಯಾಯ ಸಮ್ಮತವೇ?**
3. ಇದು **ಸದ್ಭಾವನೆ** ಮತ್ತು **ಉತ್ತಮ ಸ್ನೇಹ ಸಂಬಂಧವನ್ನು** ಬೆಳೆಸಬಲ್ಲುದೇ ?
4. ಇದು ಸಂಬಂಧಪಟ್ಟ ಎಲ್ಲರಿಗೆ **ಪ್ರಯೋಜನಕಾರಿಯೇ?**

**ಗಮನಿಸಿ:**

**"Healthy Behaviour for a Healthy Heart"**

**ಈ ವಿಷಯದ ಬಗ್ಗೆ ತಜ್ಞ ವೈದ್ಯರಿಂದ ಉಪನ್ಯಾಸ ಕಾರ್ಯಕ್ರಮವನ್ನು ಮ್ಯಾಕ್ಸ್ ಆಸ್ಪತ್ರೆಯಲ್ಲಿ ಮುಂದಿನವಾರ ಏರ್ಪಡಿಸುತ್ತೇವೆ. ದಿನಾಂಕ ಹಾಗೂ ಸಮಯವನ್ನು ತಿಳಿಸಲಾಗುವುದು.**


## ವೃದ್ಧರಾಗಬಾರದು – ಹಿರಿಯರಾಗಬೇಕು...

ಈ ಎರಡರ ಪದಗಳ ನಡುವಿನ ವ್ಯತ್ಯಾಸವನ್ನು ತಿಳಿದುಕೊಂಡು ನಾವು ಈ ಅಮೂಲ್ಯ ಜೀವನವನ್ನು ಪೂರ್ತಿಯಾಗಿ ಆನಂದಿಸಬೇಕು. ಒಬ್ಬ ವ್ಯಕ್ತಿಯು ವಯಸ್ಸಾದಾಗ **"ವೃದ್ಧ"** ಅಲ್ಲ **"ಹಿರಿಯ"**ನಾಗಬೇಕು.

- **'ವೃದ್ಧಾಪ್ಯ'** – ಇನ್ನೊಬ್ಬರನ್ನು ಆಧಾರಕ್ಕಾಗಿ ಹುಡುಕುತ್ತದೆ.
  **'ಹಿರಿತನ'** ಜನರಿಗೆ ಆಧಾರ ನಿಡುತ್ತದೆ.
- **'ವೃದ್ಧಾಪ್ಯ'** – ಪರರ ನಿಂದನೆಯಲ್ಲಿ ಸಮಯ ವ್ಯರ್ಥ ಮಾಡುತ್ತಾ ಸಂಕುಚಿತ ಮನೋಭಾವ ಹೊಂದಿರುತ್ತದೆ.
  **'ಹಿರಿತನ'** ಬದಲಾಗುತ್ತಿರುವ ಕಾಲದೊಡನೆ ಹೊಂದಿಕೊಳ್ಳುತ್ತಾ ವಿಶಾಲ ಮನೋಭಾವ ಹೊಂದಿರುತ್ತದೆ.
- **'ವೃದ್ಧಾಪ್ಯ'** – ಹೊಸ ಪೀಳಿಗೆಯ ಮೇಲೆ ತನ್ನ ಅಭಿಪ್ರಾಯನ್ನು ಹೇರುತ್ತದೆ.
  **'ಹಿರಿತನ'** ಯುವ ಪೀಳಿಗೆಯ ಅಭಿಪ್ರಾಯವನ್ನು ಅರ್ಥಮಾಡಿಕೊಂಡು ಗೌರವಿಸುತ್ತದೆ.
- **'ವೃದ್ಧಾಪ್ಯ'** – ಜೀವನದ ಸಂಜೆಯಲ್ಲಿ ಅದರ ಅಂತ್ಯವನ್ನು ಹುಡುಕುತ್ತದೆ.
  **'ಹಿರಿತನ'** ಜೀವನದ ಸಂಜೆಯಲ್ಲೂ ನವೋದಯವನ್ನು ಕಾಣುತ್ತಾ ಯುವ ಪೀಳಿಗೆಯ ಸ್ಫೂರ್ತಿಯಿಂದ ಪ್ರೇರಿತವಾಗುತ್ತದೆ.

ವಯಸ್ಸು ಎಷ್ಟೇ ಇರಲಿ, ಮನಸ್ಸು ಸದಾ ಹೂವಿನಂತೆ ಅರಳಿ, ಉತ್ಸಾಹದಿಂದ ಬದುಕೋಣ ಮತ್ತು ಇತರರ ಜೀವನಕ್ಕೆ ಸ್ಫೂರ್ತಿಯಾಗಿರೋಣ.

**ಸಂಗ್ರಹ: ರೊ. ಎನ್.ಜಿ. ಉಷಾ**




***ROTARY INFORMATION...***

***Rotary Designated Months***

**OCT**

### 4. Economic and Community Development Month

- Organise awareness seminar on self-employment at colleges/ universities.
- Develop concept of Micro Credit system.
- Organise trade exhibitions.
- Take up Entrepreneurship Development Program.
- Organise public meetings on Consumer Rights.




**ರೋಟರಿಯ ಉದ್ದೇಶ ನಮ್ಮ – ನಿಮ್ಮೆಲ್ಲರ ಸಂಬಂಧಗಳ ಬೆಸುಗೆ**



## ಸಂಪಾದಕೀಯ

### ಪದ್ಮಭೂಷಣ ರತನ್ ಟಾಟಾಗೊಂದು ಸಲಾಮ್

ನವಭಾರತದ ಹೆಸರಾಂತ ಉದ್ಯಮಿ – ಲೋಕೋಪಕಾರಿ– ಅಪರಿಮಿತ ದೇಶಭಕ್ತ ಟಾಟಾ ಸನ್ಸ್‌ನ ಗೌರವಾನ್ವಿತ ಅಧ್ಯಕ್ಷರಾಗಿದ್ದ ರತನ್ ಟಾಟಾ (೮೬)ರವರು ವಯೋಸಹಜ ಖಾಯಿಲೆಗಳಿಂದ ನಮ್ಮನ್ನಗಲಿದ್ದು ಅತ್ಯಂತ ದುಃಖಕರ ವಿಷಯ. ದೇಶದಲ್ಲಿ ಹಲವಾರು ಉದ್ಯಮಿಗಳು ಬಂದು ಹೋಗಿದ್ದರೂ, ಸಾಮಾಜಿಕ ಕಳಕಳಿ, ದೇಶಭಕ್ತಿ, ಸಾಧನೆಗಳೇ ಅವರನ್ನು ಅತ್ಯುನ್ನತ ಸ್ಥಾನದಲ್ಲಿ ನಿಲ್ಲಿಸಿದೆ. ಬಿಲಿಯನೇರ್ ಆಗಿ ಹಲವಾರು ಉದ್ಯಮಗಳ ಒಡೆಯರಾಗಿದ್ದರೂ ತಾವೇ ಸ್ಥಾಪಿಸಿದ ಕೈಗಾರಿಕೆಗಳಲ್ಲಿ ಕಾರ್ಮಿಕರ ನಡುವೆ ಕೆಳಮಟ್ಟದ ಕಾರ್ಮಿಕರಾಗಿಯೂ ಕೆಲಸ ಮಾಡಿ ಎಲ್ಲ ಹಂತದ ಅನುಭವ ಹೊಂದಿದ ಮೇಲ್ಪಂಕ್ತಿ ಉದ್ಯಮಿ.


ರತನ್ ಟಾಟಾ ಅವರ ಕಂಪನಿಗಳ ಲಾಭಾಂಶದ ಪ್ರತಿಶತ 66% ಹಣವನ್ನು ಸಾಮಾಜಿಕ ಕಾರ್ಯಗಳಿಗೆ ದೇಣಿಗೆ ನೀಡುತ್ತಾ ಬಂದಿದ್ದರು. ಹಾಗಾಗಿ ದೇಶದ ಶ್ರೀಮಂತರ ಪಟ್ಟಿಯಲ್ಲಿ ಸ್ಥಾನ ಪಡೆದಿಲ್ಲ. ಆದರೆ ಬಡವರ, ದೇಶಾಭಿಮಾನಿಗಳ ಹೃದಯ ಸಿಂಹಾಸನದಲ್ಲಿ ಶಾಶ್ವತ ಸ್ಥಾನ ಪಡೆದು ನಿಜವಾದ ಪದ್ಮಭೂಷಣರಾಗಿದ್ದಾರೆ. ಇವರಿಗೆ 'ಭಾರತರತ್ನ' ಪ್ರಶಸ್ತಿ ನೀಡುವ ಮೂಲಕ ಕೇಂದ್ರ ಸರ್ಕಾರ ಗೌರವ ಸಲ್ಲಿಸಬೇಕಾದ್ದು ಕರ್ತವ್ಯ ಕೂಡಾ. ದೇಶವಾಸಿಗಳಿಂದಲೇ ಕೋಟ್ಯಾಂತರ ರೂಪಾಯಿ ಸಂಪಾದಿಸಿದ ಹಲವಾರು ಉದ್ಯಮಿಗಳು ಬಡವರಿಗಾಗಲಿ, ಸಾಮಾಜಿಕ ಕಾರ್ಯಗಳಿಗಾಗಲಿ ಕಿಲುಬು ಕಾಸೂ ಖರ್ಚು ಮಾಡದೇ ತಮ್ಮ ಮಕ್ಕಳ ಅದ್ದೂರಿ ಮದುವೆ, ತಮ್ಮ ವೈಭವದ ಜೀವನಕ್ಕಾಗಿ ಕೋಟ್ಯಂತರ ರೂಪಾಯಿಗಳನ್ನು ಖರ್ಚು ಮಾಡುವವವರ ನಡುವೆ ಇವರ ಬದುಕು ಇತರರಿಗೆ ಮಾರ್ಗದರ್ಶಿಯಾಗಬಲ್ಲದು.

ಅಂಬಾನಿ ಹದಿನೈದು ಸಾವಿರ ಕೋಟಿಯ ಅರಮನೆ ಕಟ್ಟಿದ ಸಮಯದಲ್ಲಿ "ಅಯ್ಯೋ! ಇಷ್ಟು ಖರ್ಚಿನಲ್ಲಿ ಎಷ್ಟೊಂದು ಬಡವರಿಗೆ ಮನೆ ಕಟ್ಟಿಕೊಡಬಹುದಿತ್ತು." ಎಂದಿದ್ದ ಜಗತ್ತಿನ ಏಕೈಕ ವಿಐಪಿ ರತನ್ ಟಾಟಾ. ಇಂಥಾ ದೃಷ್ಟಿಕೋನಗಳು ಮನುಷ್ಯನೊಳಗಿರುವ ಸೂಕ್ಷ್ಮ ಸಂವೇದನೆಯ ಪ್ರತೀಕ.

ರತನ್ ಟಾಟಾ ಓರ್ವ ವಿನಮ್ರ ಮತ್ತು ಸಂಕೋಚ ಸ್ವಭಾವದ ಅವಿವಾಹಿತ ಉದ್ದಿಮೆದಾರ ಎಂದೇ ಖ್ಯಾತಿ. ಹಳೆಯ ಕಾರಿನಲ್ಲಿ ಪ್ರಯಾಣಿಸುವ, ವಿಮಾನದ ಎಕಾನಮಿ ಕ್ಲಾಸ್‌ನಲ್ಲಿ ಪ್ರಯಾಣಿಸುವ ಸರಳ ಜೀವಿ. ಇವರು ಭಾರತದ ಅತಿಶ್ರೇಷ್ಠ ದರ್ಜೆಯ ಬೃಹತ್ ಉದ್ಯಮಿ

ಉಪ್ಪಿನ ಉತ್ಪಾದನೆಯಿಂದ ಹಿಡಿದು ಐಟಿ ಉದ್ಯಮದವರೆಗೆ ಎಲ್ಲ ಉದ್ಯಮಗಳಲ್ಲೂ ಇವರು ಯಶ ಸಾಧಿಸಿ ರೂ. 23.6 ಕೋಟಿ ಟ್ರಿಲಿಯನ್ ಬಂಡವಾಳ ಹೊಂದಿ 9.35,000 ಕ್ಕೂ ಹೆಚ್ಚು ದುಡಿಯುವ ಕೈಗಳಿಗೆ ನೌಕರಿ ನೀಡಿದ ಮಹನೀಯರು. ಟಾಟಾ ಅವರು ಎಷ್ಟೇ ದೊಡ್ಡ ಉದ್ಯಮಿಯಾಗಿದ್ದರೂ, ಸರಳ ಜೀವನ ಹಾಗೂ ಬಡವರಿಗಾಗಿ ಶ್ರಮಿಸುವ ಅವರ ಬದುಕಿನಿಂದಾಗಿ ಅವರು ನಮ್ಮೆಲ್ಲರ ಹೃದಯದಲ್ಲಿ ಶಾಶ್ವತ ಸ್ಥಾನ ಗಳಿಸಿದ "ಭಾರತ ರತ್ನ"ರೇ ಹೌದು. ಇವರಿಗೊಂದು ನಾವೆಲ್ಲರೂ ಗೌರವದ ಸಲಾಮ್ ಸಲ್ಲಿಸೋಣ...

• ರೊ. ಎಂ. ಮಾಧವಾಚಾರ್









## ಜನ್ಮ ದಿನದ ಶುಭಾಶಯಗಳು



Raghavendra R. Pawar
12th Oct



Ravi Patil
15-October



Bhargavi Bhat
16th October



Mary Joseph
17th Oct



Dr Rajani Pai
20th Oct

## ನೂತನ ಸದಸ್ಯರ ಪರಿಚಯ...



Name: **Rtn. S. Krishna Murthy (Ramu)**
Spouse Name: **M. Amrutha**
Profession: **Prop. Finance / Travel Agency**
Children Name: **Bharath S.K**
**Bavana S.K.**
Birthday Date : **19th March**
Wedding Anniversary: **9th March.**
Mob.No.: 98452 06706
Proposed by : Rtn. K. Suryanarayana Udpa

## ಚಿಂತನ

ದಾನದಿಂದ ಮನೆ ಸಂಪದ್ಭರಿತ
ಧ್ಯಾನದಿಂದ ಮನಸ್ಸು ಸಂಪದ್ಭರಿತ
ಪ್ರೀತಿಯಿಂದ ಹೃದಯ ಸಂಪದ್ಭರಿತ
ನಂಬಿಕೆಯಿಂದ ಬಾಂಧವ್ಯ ಸಂಪದ್ಭರಿತ
ಸಂತೋಷ ಚಿತ್ತದಿಂದ ಜೀವನ ಸಂಪದ್ಭರಿತ

– ರೊ. ಕೆ. ಸೂರ್ಯನಾರಾಯಣ ಉಡುಪ

## DISTRICT CULTURAL MEET

*** District Level, 10-11-2024, Kundapura**
*** Zonal Level, 27-10-2024, Shikaripura**

| | |
|---|---|
| 1) Bhakthigeethe | 5min |
| 2) Film Song (Solo) | 5min |
| 3) Duet Song | 5min |
| 4) Group Dance (Film or Folk) | 5min |
| 5) Mono Acting | 5min |
| 6) Group Song | 5min |
| 7) Dance (Solo) (Annet or John) | 5min |
| 8) Skit | 14 Min |

ವಿವರಗಳಿಗೆ ಸಂಪರ್ಕಿಸಿ: ರೊ. ಎಂ.ಎನ್.ಎಸ್. ಮಣಿ–9844470999

To,

Book Post

ಮುದ್ರಣ: ರಾಯಲ್ ಪ್ರಿಂಟರ್ಸ್, ಶಿವಮೊಗ್ಗ, 98862 73495